

# ಕುಂಭ ಮೇಳದಲ್ಲಿ ಕೋಟಿ ಜನ

ಆರು ವರ್ಷಗಳಿಗೊಮ್ಮೆ ನಡೆಯುವ 'ಅರ್ಧ ಕುಂಭಮೇಳ' ಪ್ರಯಾಗ ರಾಜ್‌ನಲ್ಲಿ ಮಕರ ಸಂಕ್ರಾಂತಿಯಂದು (ಜನವರಿ 15, 2019) ಆರಂಭವಾಯಿತು. ಒಟ್ಟು ಆರು ಪವಿತ್ರ ಸ್ನಾನಗಳ ನಂತರ ಮಾರ್ಚ್ 4ರ ಮಹಾಶಿವರಾತ್ರಿ ಪವಿತ್ರ ಸ್ನಾನದೊಂದಿಗೆ ಕುಂಭಮೇಳಕ್ಕೆ ತೆರೆ ಬಿತ್ತು. ಗಂಗಾನದಿ ತಟದಲ್ಲಿ ಬಿಡಾರ ಹೂಡಿದ್ದ ವಿವಿಧ ಅಖಾಡಗಳಿಗೆ ಸೇರಿದ ಸಾವಿರಾರು ಭೈರಾಗಿಗಳು ಕುಂಭಮೇಳದ ಪ್ರಮುಖ ಆಕರ್ಷಣೆ ಎನಿಸಿದ್ದರು.

ಕುಂಭಮೇಳದ ಕೊನೆಯ ದಿನ (ಮಾರ್ಚ್ 4) ಸುಮಾರು 1 ಕೋಟಿ ಜನರು ಪವಿತ್ರ ಸ್ನಾನ ಮಾಡಿದರು. ಈ ವರ್ಷದ ಕುಂಭಮೇಳದಲ್ಲಿ ಸುಮಾರು 22 ಕೋಟಿ ಜನರು ಪವಿತ್ರ ಸ್ನಾನ ಮಾಡಿದ್ದು ಹೊಸ ದಾಖಲೆಯನ್ನೇ ಬರೆಯಿತು.

ಕುಂಭಮೇಳಕ್ಕೆ ತಳಕು ಹಾಕಿಕೊಂಡಂತೆ ಒಂದು ವಿವಾದವೂ ಸುದ್ದಿ ಮಾಡಿತು.'ಕುಂಭಮೇಳ ಎಂದರೆ ವೃದ್ಧರನ್ನು ಕೈಬಿಡುವ ಜಾಗ' ಎಂಬ ಒಕ್ಕಣೆಯೊಂದಿಗೆ ಹಿಂದೂಸ್ತಾನ್ ಯುನಿಲಿವರ್ ಟ್ವೀಟ್ ಮಾಡಿದ್ದ ಜಾಹೀರಾತಿಗೆ ದೊಡ್ಡ ಮಟ್ಟದಲ್ಲಿ ಆಕ್ಷೇಪ ವ್ಯಕ್ತವಾಯಿತು. **'#KubhMela is a place where old people get abadoned...'** ಎನ್ನುವ ಸಾಲಿನೊಂದಿಗೆ ವಿಡಿಯೊ ಟ್ವೀಟ್ ಮಾಡಿದ್ದ ಹಿಂದೂಸ್ತಾನ್ ಯುನಿಲಿವರ್ ಜನರ ಆಕ್ರೋಶಕ್ಕೆ ಮಣಿದು, ಈ ಸಾಲುಗಳನ್ನು **'@ RedLabelChai encourages us to hold the hands of those who made us who we are'** ಎಂದು ಬದಲಿಸಿತು.

ತಮಿಳುನಾಡಿನ ಕಂಚಿಯಲ್ಲಿ 40 ವರ್ಷಗಳಿಗೊಮ್ಮೆ ನಡೆಯುವ ಅತ್ತಿ ವರದರಾಜ ಸ್ವಾಮಿ ದರ್ಶನ ಈ ವರ್ಷದ ಮತ್ತೊಂದು ವಿಶೇಷ. ದೇಗುಲದ ನೀರಿನ ಕೊಳದಲ್ಲಿ ಬೆಳ್ಳಿ ಪೆಟ್ಟಿಗೆಯಲ್ಲಿ ಇರಿಸಿರುವ ವರದರಾಜಸ್ವಾಮಿಯ ಮರದ ವಿಗ್ರಹವನ್ನು 40 ವರ್ಷಗಳಿಗೊಮ್ಮೆ ಹೊರಗೆ ತೆಗೆದು 48 ದಿನಗಳ ಅವಧಿಗೆ ಭಕ್ತರ ದರ್ಶನಕ್ಕೆ ಮುಕ್ತವಾಗಿರಿಸಲಾಗುತ್ತದೆ.

ಅದರಂತೆ ಜೂನ್ 28ರಂದು ಕೊಳದಿಂದ ವಿಗ್ರಹವನ್ನು ಹೊರಗೆ ತೆಗೆದು, ಆಗಸ್ಟ್ 16ರಂದು ಮತ್ತೆ ನೀರಿನಲ್ಲಿರಿಸಲಾಯಿತು. ದರ್ಶನ ಸಿಗದ ಜನರ ಸಂಖ್ಯೆ ಸಾಕಷ್ಟಿದೆ. ಹೀಗಾಗಿ ಇನ್ನಷ್ಟು ದಿನಗಳ ಕಾಲ ಭಕ್ತರಿಗೆ ವಿಗ್ರಹ ದರ್ಶನಕ್ಕೆ ಅವಕಾಶ ಮಾಡಿಕೊಡಲು ಸರ್ಕಾರಕ್ಕೆ ಸೂಚಿಸಬೇಕು ಎಂದು ಮದ್ರಾಸ್ ಹೈಕೋರ್ಟ್‌ಗೆ ಭಕ್ತರು ಅರ್ಜಿ ಹಾಕಿದ್ದರು. ಆದರೆ ಸಂಪ್ರದಾಯದ ವಿಚಾರದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಹೈಕೋರ್ಟ್ ಅರ್ಜಿಯನ್ನು ವಜಾ ಮಾಡಿತು.

# 11 ಜಿಡಿಪಿ ಜಾರಾಟ



ನೋಟು ರದ್ದತಿಯ ನಂತರ ಆರಂಭವಾದ ಆರ್ಥಿಕ ಕ್ಷೇತ್ರದ ಕಳಾಹೀನ ಸ್ಥಿತಿ ಈ ವರ್ಷವೂ ಮುಂದುವರಿಯಿತು. ಜಿಎಸ್‌ಟಿ ಹೊಡೆತಕ್ಕೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಬಾಗಿಲು ಹಾಕುವುದರೊಂದಿಗೆ ಜನರ ಬದುಕಿನಲ್ಲಿ ಉತ್ಸಾಹ ಬತ್ತಿಹೋಯಿತು. ಇನ್ನೊಂದೆಡೆ ಸರ್ಕಾರದ ಮಟ್ಟದಲ್ಲಿಯೂ ತೆರಿಗೆ ಸಂಗ್ರಹ ನಿರೀಕ್ಷೆ ಮುಟ್ಟಲಿಲ್ಲ.

2018–19ನೇ ಹಣಕಾಸು ವರ್ಷದಲ್ಲಿ 'ದೇಶಿ ಆರ್ಥಿಕ ವೃದ್ಧಿ ದರ'ವು (ಜಿಡಿಪಿ) ಶೇ 6.8ರಷ್ಟು ದಾಖಲಾಗಿ ಐದು ವರ್ಷಗಳ ಕನಿಷ್ಠ ಮಟ್ಟ ಎನಿಸಿಕೊಂಡಿತು. 2019–20ರ ಸಾಲಿನಲ್ಲಿ ಈ ದರವು ಶೇ. 6ಕ್ಕೆ ಕುಸಿಯುವ ಅಂದಾಜನ್ನು ವಿಶ್ವಬ್ಯಾಂಕ್ ಪ್ರಕಟಿಸಿದೆ.

ಆರ್ಥಿಕ ಕುಸಿತ ತಡೆಗಟ್ಟಲು ಸರ್ಕಾರವು ರಿಸರ್ವ್ ಬ್ಯಾಂಕ್‌ನಲ್ಲಿರುವ ₹ 1.76 ಲಕ್ಷ ಕೋಟಿ ಮೀಸಲು ನಿಧಿಯನ್ನು ಹಿಂಪಡೆದು ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಮುಂದಾಯಿತು. ಈ ನಿಧಿಯನ್ನು ಬ್ಯಾಂಕ್‌ಗಳ ಪುನರ್ಧನಕ್ಕೆ ಬಳಸುವ ಮೂಲಕ ಆರ್ಥಿಕತೆಗೆ ಶಕ್ತಿ ತುಂಬುವುದು ತನ್ನ ಉದ್ದೇಶ ಎಂದು ಸರ್ಕಾರ ಬಿಂಬಿಸಿಕೊಂಡಿತ್ತು.

ದ್ವೈಮಾಸಿಕ ಹಣಕಾಸು ನೀತಿ ಪರಾಮರ್ಶೆಯಲ್ಲಿ ಅಲ್ಪಾವಧಿ ಬಡ್ಡಿ ದರವನ್ನು ಹಂತಹಂತವಾಗಿ ತಗ್ಗಿಸಿದ ರಿಸರ್ವ್ ಬ್ಯಾಂಕ್, ವಾಣಿಜ್ಯ ಬ್ಯಾಂಕ್‌ಗಳಲ್ಲಿಯೂ ಬಡ್ಡಿದರಗಳು ಇಳಿಯುವ ನಿರೀಕ್ಷೆ ಹುಟ್ಟುಹಾಕಿತು. ಗೃಹ, ವಾಹನ ಖರೀದಿ ಸಾಲಗಳ ಮೇಲಿನ ಕಂತುಗಳು ಮತ್ತು ಉದ್ದಿಮೆಗಳ ಸಾಲದ ಮೇಲಿನ ಬಡ್ಡಿದರ ಕಡಿಮೆಯಾಗಬಹುದು ಎಂಬ ಮಧ್ಯಮ ವರ್ಗದ ಕನಸು ಪೂರ್ಣ ಪ್ರಮಾಣದಲ್ಲಿ ನನಸಾಗಲಿಲ್ಲ.

ಕೇಂದ್ರ ಸರ್ಕಾರದ ಉಳಿತಾಯ ಯೋಜನೆಗಳ ಬಡ್ಡಿದರಗಳನ್ನು ಇಳಿಸಬೇಕೆಂದು ಬ್ಯಾಂಕ್‌ಗಳೇ ಪ್ರಸ್ತಾಪಿಸಿದ್ದು ಈ ವರ್ಷದ ಮತ್ತೊಂದು ಮುಖ್ಯ ಬೆಳವಣಿಗೆ. ಮುಖ್ಯವಾಗಿ ಅಂಚೆ ಕಚೇರಿಯ ಮೂಲಕ ಚಾಲನೆಯಲ್ಲಿರುವ ಉಳಿತಾಯ ಯೋಜನೆಗಳ ಬಡ್ಡಿ ಇಳಿಯದೆ ಬ್ಯಾಂಕ್‌ಗಳು ನಿಗದಿತ ಠೇವಣಿಗಳ ಬಡ್ಡಿದರಗಳನ್ನು ಇಳಿಸಲು ಸಾಧ್ಯವಾಗದು ಎನ್ನುವುದು ಬ್ಯಾಂಕಿಂಗ್ ಕ್ಷೇತ್ರದ ವಾದ.

ಬ್ಯಾಂಕ್‌ಗಳ ವಿಲೀನ ಈ ವರ್ಷದ ಮತ್ತೊಂದು ದೊಡ್ಡ ಆರ್ಥಿಕ ಸುದ್ದಿ. ಬ್ಯಾಂಕ್ ಆಫ್ ಬರೋಡಾ ಜೊತೆಗೆ ವಿಜಯ ಬ್ಯಾಂಕ್ ಮತ್ತು ದೇನಾ ಬ್ಯಾಂಕ್‌ಗಳನ್ನು ವಿಲೀನಗೊಳಿಸಲಾಯಿತು. 2017ರಲ್ಲಿ ಸ್ಟೇಟ್ ಬ್ಯಾಂಕ್ ಸಮೂಹ ವಿಲೀನವಾದಾಗ ವ್ಯಕ್ತವಾದಷ್ಟು ಪ್ರತಿಭಟನೆಯ ಧ್ವನಿ ಈ ಬಾರಿ ಕೇಳಿಬರಲಿಲ್ಲ. ಆದರೆ ಲಾಭದಲ್ಲಿದ್ದ ಕರಾವಳಿ ಕರ್ನಾಟಕದ ಪ್ರಮುಖ ಬ್ಯಾಂಕ್ ತನ್ನ ಅಸ್ತಿತ್ವ ಕಳೆದುಕೊಂಡಿತು.

ಮುಂದಿನ ದಿನಗಳಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಹಾಗೂ ಯುನೈಟೆಡ್ ಬ್ಯಾಂಕ್ ವಿಲೀನವಾಗಲಿದೆ. ಕೆನರಾ ಬ್ಯಾಂಕ್‌ನಲ್ಲಿ ಸಿಂಡಿಕೇಟ್ ಬ್ಯಾಂಕ್, ಇಂಡಿಯನ್ ಬ್ಯಾಂಕ್‌ನಲ್ಲಿ ಅಲಹಾಬಾದ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಆಂಧ್ರಾ ಮತ್ತು ಕಾರ್ಪೊರೇಷನ್ ಬ್ಯಾಂಕ್ ವಿಲೀನವಾಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.